70. ಅಲ್ ಮಆರಿಜ್

ಸೂ. 44 ರು. 2

سُورَةُ الْمَعَارِجِ مَكِّيَّةٌ

(ಅವತೀರ್ಣ - ಮಕ್ಕಾದಲ್ಲಿ)

ಪರಮ ದಯಾಮಯನೂ ಕರುಣಾನಿಧಿಯೂ ಆದ ಅಲ್ಲಾಹನ ನಾಮದಿಂದ

بِسْمِ اللّٰهِ الرَّحْمٰنِ الرَّحِيْمِ

1. ಬೇಡುವವನೊಬ್ಬನು ಯಾತನೆಯನ್ನು ಬೇಡಿದ್ದಾನೆ. ಅದು (ಆ ಯಾತನೆಯು) ಖಂಡಿತವಾಗಿಯೂ ಸಂಭವಿಸಿಯೇ ತೀರುವುದು-

سَاَلَ سَآئِلٌۢ بِعَذَابٍ وَّاقِعٍ ①

2. (ಅದು) ಸತ್ಯನಿಷೇಧಿಗಳಿಗಾಗಿದೆ. ಅದನ್ನು ತಡೆಯಬಲ್ಲವರು ಯಾರೂ ಇಲ್ಲ.

لِّلْكٰفِرِيْنَ لَيْسَ لَهٗ دَافِعٌ ②

3. (ಅದು) ಉನ್ನತಿಯ ಸೋಪಾನಗಳ ಒಡೆಯನಾದ ಅಲ್ಲಾಹನ ಕಡೆಯಿಂದ ಬರಲಿದೆ.

مِّنَ اللّٰهِ ذِى الْمَعَارِجِ ③

4. ದೇವಚರರು ಮತ್ತು ರೂಹ್[1] ಅವನ ಸಾನ್ನಿಧ್ಯಕ್ಕೆ ಐವತ್ತು ಸಾವಿರ ವರುಷಗಳ ಅವಧಿಯುಳ್ಳ[2] ಒಂದು ದಿನದಲ್ಲಿ ಏರಿ ಹೋಗುತ್ತಾರೆ.[3]

تَعْرُجُ الْمَلٰٓئِكَةُ وَالرُّوْحُ اِلَيْهِ فِىْ يَوْمٍ كَانَ مِقْدَارُهٗ خَمْسِيْنَ اَلْفَ سَنَةٍ ④

5. ಆದುದರಿಂದ ಸಂದೇಶವಾಹಕರೇ, ತಾಳ್ಮೆ ವಹಿಸಿರಿ, ಸಭ್ಯ ತಾಳ್ಮೆ.[4]

فَاصْبِرْ صَبْرًا جَمِيْلًا ⑤

---

1. ರೂಹ್ ಎಂದರೆ ಹ. ಜಿಬ್ರೀಲ್(ಅ). ಅವರ ಶ್ರೇಷ್ಠತೆಯಿಂದಾಗಿ ಅವರನ್ನು ದೇವಚರರಿಂದ ಪ್ರತ್ಯೇಕವಾಗಿ ಪ್ರಸ್ತಾಪಿಸಲಾಗಿದೆ.
2. ಸೂರಃ ಹಜ್ಜ್‌ನ 47ನೆಯ ಸೂಕ್ತ ಮತ್ತು ಸೂರಃ ಅಸ್ಸಜದಃದ 5ನೆಯ ಸೂಕ್ತದಲ್ಲಿ ಸಾವಿರ ವರ್ಷದ ಒಂದು ದಿನದ ಬಗ್ಗೆ ಪ್ರಸ್ತಾಪಿಸಲಾಗಿದೆ. ಇಲ್ಲಿ ಯಾತನೆಯ ಅಪೇಕ್ಷೆಗೆ ಉತ್ತರವಾಗಿ ಅಲ್ಲಾಹನ ಒಂದು ದಿನದ ಪ್ರಮಾಣ ಐವತ್ತು ಸಾವಿರ ವರ್ಷವೆಂದು ಹೇಳಲಾಗಿದೆ. ಅರ್ಥಾತ್, ಜನರು ತಮ್ಮ ಮೆದುಳು ಮತ್ತು ತಮ್ಮ ವಿಚಾರ ಕ್ಷೇತ್ರದ ಸಂಕುಚಿತತೆಯಿಂದಾಗಿ ದೇವನ ವಿಷಯವನ್ನೂ ತಮ್ಮ ಮಾನದಂಡದಿಂದ ಅಳೆಯುತ್ತಾರೆ. ಅವರಿಗೆ ಐವತ್ತು-ನೂರು ವರ್ಷಗಳ ಅವಧಿಯೂ ಬಹಳ ದೀರ್ಘವೆಂದು ಭಾಸವಾಗುತ್ತದೆ. ಆದರೆ ಅಲ್ಲಾಹನ ಬಳಿ ಒಂದೊಂದು ಯೋಜನೆಯೂ ಸಾವಿರಗಟ್ಟಲೆ ಅಥವಾ ಐವತ್ತೈವತ್ತು ಸಾವಿರ ವರ್ಷಗಳದ್ದಾಗಿರುತ್ತದೆ. ಈ ಕಾಲಾವಧಿಯೂ ಕೇವಲ ಉದಾಹರಣಾರ್ಥವಾಗಿದೆ.
3. ಈ ವಿಷಯವು 'ಮುತಶಾಬಿಹಾತ್'ಗೆ ಸೇರಿದ್ದಾಗಿದೆ. ಆದ್ದರಿಂದ ಅದರ ಅರ್ಥವನ್ನು ನಿರ್ಧರಿಸಲು ಸಾಧ್ಯವಿಲ್ಲ. ನಮಗೆ ದೇವಚರರ ವಾಸ್ತವಿಕತೆಯಾಗಲಿ ಅವರು ಏರಿ ಹೋಗುವ ಸ್ವರೂಪವಾಗಲಿ ತಿಳಿದಿಲ್ಲ. ದೇವಚರರು ಏರಿ ಹೋಗುವ ಆ ಏಣಿಗಳು ಹೇಗಿರಬಹುದೆಂದು ಊಹಿಸಲಿಕ್ಕೂ ನಮ್ಮಿಂದ ಸಾಧ್ಯವಿಲ್ಲ. ಅಲ್ಲಾಹನ ಬಗ್ಗೆಯೂ ಅವನು ಯಾವ ನಿರ್ದಿಷ್ಟ ಸ್ಥಳದಲ್ಲಿರುತ್ತಾನೆಂದು ಕಲ್ಪಿಸಲು ಸಾಧ್ಯವಿಲ್ಲ. ಏಕೆಂದರೆ ಅವನ ಅಸ್ತಿತ್ವವು ಕಾಲ ಮತ್ತು ವಾಸದ ಬಂಧನಗಳಿಂದ ಮುಕ್ತವಾಗಿದೆ.
4. ಅರ್ಥಾತ್- ವಿಶಾಲ ಮನೋಭಾವದ ವ್ಯಕ್ತಿಯೊಬ್ಬನಿಗೆ ಭೂಷಣಪ್ರಾಯವಾದಂತಹ ತಾಳ್ಮೆ.

6. ಇವರು ಅದನ್ನು ದೂರವೆಂದು ಭಾವಿಸುತ್ತಾರೆ-

إِنَّهُمْ يَرَوْنَهُۥ بَعِيدًا ﴿٦﴾

7. ಮತ್ತು ನಾವು ಅದನ್ನು ಸಮೀಪದಲ್ಲಿ ಕಾಣುತ್ತಿದ್ದೇವೆ.

وَنَرَىٰهُ قَرِيبًا ﴿٧﴾

8. (ಆ ಯಾತನೆ ಸಂಭವಿಸುವ) ಆ ದಿನ ಆಕಾಶವು ಕರಗಿದ ಬೆಳ್ಳಿಯಂತಾಗುವುದು-[5]

يَوْمَ تَكُونُ ٱلسَّمَآءُ كَٱلْمُهْلِ ﴿٨﴾

9. ಮತ್ತು ಪರ್ವತಗಳು ಬಣ್ಣ ಬಣ್ಣದ ಹಿಂಜಿದ ಉಣ್ಣೆಯಂತಾಗುವುವು-

وَتَكُونُ ٱلْجِبَالُ كَٱلْعِهْنِ ﴿٩﴾

10. ಮತ್ತು ಯಾವ ಆಪ್ತ ಮಿತ್ರನೂ ತನ್ನ ಆಪ್ತ ಮಿತ್ರನನ್ನು ವಿಚಾರಿಸಲಾರನು.

وَلَا يَسْـَٔلُ حَمِيمٌ حَمِيمًا ﴿١٠﴾

11-14. ವಸ್ತುತಃ ಅವರು ಪರಸ್ಪರರಿಗೆ ತೋರಿಸಲ್ಪಡುವರು. ಅಪರಾಧಿಯು ಅಂದಿನ ಯಾತನೆಯಿಂದ ಪಾರಾಗಲಿಕ್ಕಾಗಿ ತನ್ನ ಮಕ್ಕಳನ್ನು, ತನ್ನ ಪತ್ನಿಯನ್ನು, ತನ್ನ ಸಹೋದರರನ್ನು, ತನಗೆ ಆಶ್ರಯ ನೀಡುತ್ತಿದ್ದ ತನ್ನ ಅತ್ಯಂತ ಆಪ್ತ ಕುಟುಂಬವನ್ನು ಮತ್ತು ಭೂಮುಖದಲ್ಲಿರುವ ಎಲ್ಲ ಜನರನ್ನೂ ಪರಿಹಾರವಾಗಿ ಕೊಡಬಯಸುವನು ಮತ್ತು ಈ ಪರಿಹಾರವು ತನ್ನನ್ನು ಪಾರುಗೊಳಿಸಬಹುದೆಂದು ಭಾವಿಸುವನು.

يُبَصَّرُونَهُمْ ۚ يَوَدُّ ٱلْمُجْرِمُ لَوْ يَفْتَدِى مِنْ عَذَابِ يَوْمِئِذٍۭ بِبَنِيهِ ﴿١١﴾
وَصَٰحِبَتِهِۦ وَأَخِيهِ ﴿١٢﴾
وَفَصِيلَتِهِ ٱلَّتِى تُـْٔوِيهِ ﴿١٣﴾
وَمَن فِى ٱلْأَرْضِ جَمِيعًا ثُمَّ يُنجِيهِ ﴿١٤﴾

15. ಖಂಡಿತ ಇಲ್ಲ. ಅದು ಧಗಧಗಿಸುವ ಅಗ್ನಿಯ ಜ್ವಾಲೆಯಾಗಿರುವುದು-

كَلَّآ ۖ إِنَّهَا لَظَىٰ ﴿١٥﴾

16. ಅದು ಮಾಂಸವನ್ನೂ ಚರ್ಮವನ್ನೂ ನೆಕ್ಕಿ ಬಿಡುವುದು.

نَزَّاعَةً لِّلشَّوَىٰ ﴿١٦﴾

17-18. ಸತ್ಯದಿಂದ ವಿಮುಖನಾದ, ಬೆನ್ನು ತಿರುಗಿಸಿದ, ಸಂಪತ್ತನ್ನು ಕಲೆ ಹಾಕಿದ ಮತ್ತು ಜೋಪಾನವಾಗಿ ಸಂಗ್ರಹಿಸಿಟ್ಟ ಪ್ರತಿಯೊಬ್ಬನನ್ನೂ ಕೂಗಿ ಕೂಗಿ ತನ್ನ ಕಡೆಗೆ ಕರೆಯುವುದು.

تَدْعُوا۟ مَنْ أَدْبَرَ وَتَوَلَّىٰ ﴿١٧﴾
وَجَمَعَ فَأَوْعَىٰ ﴿١٨﴾

19. ಮಾನವನು ಚಂಚಲನಾಗಿಯೇ ಸೃಷ್ಟಿಸಲ್ಪಟ್ಟಿದ್ದಾನೆ.[6]

إِنَّ ٱلْإِنسَٰنَ خُلِقَ هَلُوعًا ﴿١٩﴾

20. ಅವನಿಗೆ ಸಂಕಷ್ಟ ಬಂದಾಗ ಗಾಬರಿಗೊಳ್ಳುತ್ತಾನೆ-

إِذَا مَسَّهُ ٱلشَّرُّ جَزُوعًا ﴿٢٠﴾

---

5. ಅರ್ಥಾತ್- ಪ್ರತಿ ಬಾರಿಗೂ ಅದು ಬಣ್ಣ ಬದಲಾಯಿಸುವುದು.

6. ನಮ್ಮ ಭಾಷೆಯಲ್ಲಿ ಇದನ್ನು ನಾವು ಹೀಗೆನ್ನುತ್ತೇವೆ, "ಇದು ಅವನ ಹುಟ್ಟು ಗುಣ" ಅಥವಾ "ಇದು ಅವನ ಸಹಜ ದೌರ್ಬಲ್ಯ" ಅದನ್ನೇ ಅಲ್ಲಾಹನು, "ಮಾನವ ಹೀಗೆಯೇ ಸೃಷ್ಟಿಸಲ್ಪಟ್ಟಿದ್ದಾನೆ" ಎಂದು ವಿವರಿಸುತ್ತಿದ್ದಾನೆ.

21. ಮತ್ತು ಸೌಭಾಗ್ಯ ಪ್ರಾಪ್ತವಾದಾಗ ಲೋಭ ತೋರುತ್ತಾನೆ-

وَّاِذَا مَسَّهُ الْخَيْرُ مَنُوْعًا ﴿٢١﴾

22. ಆದರೆ ನಮಾಝ್ ಮಾಡುವವರು (ಈ ದೋಷದಿಂದ ಮುಕ್ತರಾಗಿದ್ದಾರೆ.)

اِلَّا الْمُصَلِّيْنَ ﴿٢٢﴾

23. ಅವರು ತಮ್ಮ ನಮಾಝನ್ನು ಸದಾ ಪಾಲಿಸುತ್ತಾರೆ.

الَّذِيْنَ هُمْ عَلٰى صَلَاتِهِمْ دَآئِمُوْنَ ﴿٢٣﴾

24. ಅವರ ಸಂಪತ್ತುಗಳಲ್ಲಿ ಒಂದು ನಿಶ್ಚಿತ ಹಕ್ಕಿದೆ.

وَالَّذِيْنَ فِيْٓ اَمْوَالِهِمْ حَقٌّ مَّعْلُوْمٌ ﴿٢٤﴾

25. ಬೇಡುವವನಿಗೆ ಮತ್ತು ವಂಚಿತನಿಗೆ.

لِّلسَّآئِلِ وَالْمَحْرُوْمِ ﴿٢٥﴾

26. ಅವರು ಪ್ರತಿಫಲ ಸಿಗಲಿರುವ ದಿನವನ್ನು ಸತ್ಯವೆಂದು ನಂಬುತ್ತಾರೆ.

وَالَّذِيْنَ يُصَدِّقُوْنَ بِيَوْمِ الدِّيْنِ ﴿٢٦﴾

27. ಅವರು ತಮ್ಮ ಪ್ರಭುವಿನ ಯಾತನೆಗೆ ಭಯಪಡುತ್ತಾರೆ.

وَالَّذِيْنَ هُمْ مِّنْ عَذَابِ رَبِّهِمْ مُّشْفِقُوْنَ ﴿٢٧﴾

28. ಏಕೆಂದರೆ, ಅವರ ಪ್ರಭುವಿನ ಯಾತನೆಯು ನಿರ್ಭಯವಾಗಿರತಕ್ಕ ವಸ್ತುವಲ್ಲ.

اِنَّ عَذَابَ رَبِّهِمْ غَيْرُ مَاْمُوْنٍ ﴿٢٨﴾

29. ಅವರು ತಮ್ಮ ಗುಪ್ತಾಂಗಗಳನ್ನು ರಕ್ಷಿಸಿಕೊಳ್ಳುತ್ತಾರೆ-

وَالَّذِيْنَ هُمْ لِفُرُوْجِهِمْ حٰفِظُوْنَ ﴿٢٩﴾

30. ತಮ್ಮ ಪತ್ನಿಯರ ಅಥವಾ ತಮ್ಮ ಅಧೀನ ಸ್ತ್ರೀಯರ (ದಾಸಿಯರ) ಹೊರತು. ಇವರಿಂದ ರಕ್ಷಿಸಿಕೊಳ್ಳದಿದ್ದರೆ, ಅವರ ಮೇಲೆ ಆಕ್ಷೇಪವೇನೂ ಇಲ್ಲ.

اِلَّا عَلٰٓى اَزْوَاجِهِمْ اَوْ مَا مَلَكَتْ اَيْمَانُهُمْ فَاِنَّهُمْ غَيْرُ مَلُوْمِيْنَ ﴿٣٠﴾

31. ಆದರೆ, ಇದರ ಹೊರತು ಇನ್ನೇನಾದರೂ ಬಯಸುವವರೇ ಸೀಮೋಲ್ಲಂಘಕರು-

فَمَنِ ابْتَغٰى وَرَآءَ ذٰلِكَ فَاُولٰٓئِكَ هُمُ الْعٰدُوْنَ ﴿٣١﴾

32. ಅವರು ತಮ್ಮಲ್ಲಿರಿಸಿದ ಅಮಾನತುಗಳ ರಕ್ಷಣೆ ಮಾಡುತ್ತಾರೆ ಮತ್ತು ತಮ್ಮ ವಾಗ್ದಾನಗಳನ್ನು ಪಾಲಿಸುತ್ತಾರೆ.

وَالَّذِيْنَ هُمْ لِاَمٰنٰتِهِمْ وَعَهْدِهِمْ رٰعُوْنَ ﴿٣٢﴾

33. ಅವರು ತಮ್ಮ ಸಾಕ್ಷ್ಯಗಳಲ್ಲಿ ಸತ್ಯದಲ್ಲೇ ಸ್ಥಿರವಾಗಿರುತ್ತಾರೆ.

وَالَّذِيْنَ هُمْ بِشَهٰدٰتِهِمْ قَآئِمُوْنَ ﴿٣٣﴾

34. ಅವರು ತಮ್ಮ ನಮಾಝನ್ನು ರಕ್ಷಿಸುತ್ತಾರೆ.

وَالَّذِيْنَ هُمْ عَلٰى صَلَاتِهِمْ يُحَافِظُوْنَ ﴿٣٤﴾

35. ಇಂತಹವರು ಗೌರವದೊಂದಿಗೆ ಸ್ವರ್ಗೋದ್ಯಾನಗಳಲ್ಲಿರುವರು.

اُولٰٓئِكَ فِيْ جَنّٰتٍ مُّكْرَمُوْنَ ﴿٣٥﴾ ع

36-37. ಆದುದರಿಂದ ಸಂದೇಶವಾಹಕರೇ, ಈ ಸತ್ಯನಿಷೇಧಿಗಳು ಎಡಬಲಗಳಿಂದ ಗುಂಪು ಗುಂಪಾಗಿ ನಿಮ್ಮ ಕಡೆಗೆ ಧಾವಿಸಿ ಬರುತ್ತಿರುವುದೇಕೆ?[7]

فَمَالِ الَّذِينَ كَفَرُوا قِبَلَكَ مُهْطِعِينَ ﴿٣٦﴾ عَنِ الْيَمِينِ وَعَنِ الشِّمَالِ عِزِينَ ﴿٣٧﴾

38. ಅವರಲ್ಲಿ ಪ್ರತಿಯೊಬ್ಬನೂ ತಾನು ಸಂಪದ್ಭರಿತವಾದ ಸ್ವರ್ಗೋದ್ಯಾನಗಳಲ್ಲಿ ಪ್ರವೇಶ ಗೊಳಿಸಲ್ಪಡುವನೆಂದು ಆಶಿಸುತ್ತಿರುವನೇ?

أَيَطْمَعُ كُلُّ امْرِئٍ مِّنْهُمْ أَن يُدْخَلَ جَنَّةَ نَعِيمٍ ﴿٣٨﴾

39. ಖಂಡಿತ ಇಲ್ಲ. ನಾವು ಯಾವ ವಸ್ತುವಿನಿಂದ ಇವರನ್ನು ಸೃಷ್ಟಿಸಿರುವೆವೋ ಅದನ್ನಿವರು ಸ್ವತಃ ಬಲ್ಲರು.

كَلَّا ۖ إِنَّا خَلَقْنَاهُم مِّمَّا يَعْلَمُونَ ﴿٣٩﴾

40. ಇಲ್ಲ, ನಾನು ಪೂರ್ವಗಳ ಮತ್ತು ಪಶ್ಚಿಮಗಳ[8] ಒಡೆಯನ ಆಣೆ ಹಾಕುತ್ತೇನೆ, ಶಕ್ತರಾಗಿದ್ದೇವೆ ನಾವು-

فَلَا أُقْسِمُ بِرَبِّ الْمَشَارِقِ وَالْمَغَارِبِ إِنَّا لَقَادِرُونَ ﴿٤٠﴾

41. ಇವರ ಸ್ಥಾನದಲ್ಲಿ ಇವರಿಗಿಂತ ಉತ್ತಮರನ್ನು ತರಲು! ನಮ್ಮನ್ನು ಮೀರಿಸುವವರು ಯಾರೂ ಇಲ್ಲ.

عَلَىٰ أَن نُّبَدِّلَ خَيْرًا مِّنْهُمْ وَمَا نَحْنُ بِمَسْبُوقِينَ ﴿٤١﴾

42. ಆದುದರಿಂದ ಇವರೊಡನೆ ವಾಗ್ದಾನ ಮಾಡಲಾಗುತ್ತಿರುವ ತಮ್ಮ ಆ ದಿನವನ್ನು ತಲುಪುವ ವರೆಗೂ ಇವರನ್ನು ಇವರ ಅಸಂಬದ್ಧ ಮಾತುಗಳಲ್ಲಿ ಮತ್ತು ಆಟಗಳಲ್ಲಿ ಬಿದ್ದುಕೊಂಡಿರಲು ಬಿಟ್ಟು ಬಿಡಿರಿ.

فَذَرْهُمْ يَخُوضُوا وَيَلْعَبُوا حَتَّىٰ يُلَاقُوا يَوْمَهُمُ الَّذِي يُوعَدُونَ ﴿٤٢﴾

43. ಅಂದು ಇವರು ತಮ್ಮ ಸಮಾಧಿಗಳಿಂದ ಹೊರಟು- ತಮ್ಮ ವಿಗ್ರಹಾಲಯಗಳ ಕಡೆಗೆ ಓಡುವಂತೆ, ಓಡಿ ಹೋಗುತ್ತಿರುವರು-

يَوْمَ يَخْرُجُونَ مِنَ الْأَجْدَاثِ سِرَاعًا كَأَنَّهُمْ إِلَىٰ نُصُبٍ يُوفِضُونَ ﴿٤٣﴾

44. ಇವರ ದೃಷ್ಟಿಗಳು ತಗ್ಗಿರುವುವು. ಅಪಮಾನವು ಇವರನ್ನು ಆವರಿಸಿಕೊಂಡಿರುವುದು. ಇವರಿಗೆ ವಾಗ್ದಾನವೀಯಲಾಗುತ್ತಿರುವ ದಿನ ಅದೇ ಆಗಿದೆ.

خَاشِعَةً أَبْصَارُهُمْ تَرْهَقُهُمْ ذِلَّةٌ ۚ ذَٰلِكَ الْيَوْمُ الَّذِي كَانُوا يُوعَدُونَ ﴿٤٤﴾

---

7. ಪ್ರವಾದಿವರ್ಯರ(ಸ) ಸಂದೇಶ ಪ್ರಚಾರ ಮತ್ತು ಕುರ್‌ಆನ್ ಪಠಣದ ಸ್ವರ ಕೇಳಿ ಅಪಹಾಸ್ಯ ಮಾಡಲು ಮತ್ತು ಗುಲ್ಲೆಬ್ಬಿಸಲು ನಾಲ್ಕೂ ಕಡೆಯಿಂದ ಓಡೋಡಿ ಬರುತ್ತಿದ್ದವರ ಕುರಿತು ಈ ಮಾತು ಹೇಳಲಾಗಿದೆ.

8. ಒಂದು ವರ್ಷದ ಅವಧಿಯಲ್ಲಿ ಸೂರ್ಯ ಪ್ರತಿದಿನ ಒಂದು ಹೊಸ ಕೋನದಿಂದ ಉದಯಿಸಿ ಹೊಸ ದಿಕ್ಕಿನಲ್ಲಿ ಅಸ್ತಮಿಸುತ್ತದೆ. ಅಲ್ಲದೆ ಭೂಮಿಯ ವಿವಿಧೆಡೆಗಳಲ್ಲಿ ಸೂರ್ಯ ಬೇರೆ ಬೇರೆ ಅವಧಿಯಲ್ಲಿ ಸರಣಿಯಂತೆ ಉದಯಾಸ್ತಮಾನವಾಗುತ್ತಿರುತ್ತದೆ. ಈ ಆಧಾರದಲ್ಲಿ ಪೂರ್ವ ಮತ್ತು ಪಶ್ಚಿಮ ಒಂದಲ್ಲ ಬದಲಾಗಿ ಅನೇಕವಿದೆ. ಆದ್ದರಿಂದ ಪೂರ್ವಗಳು ಮತ್ತು ಪಶ್ಚಿಮಗಳು ಎಂಬ ಪದ ಪ್ರಯೋಗಿಸಲಾಗಿದೆ.